ಕರ್ನಾಟಕ ಸರ್ಕಾರ

# ಕರ್ನಾಟಕ ಜೀವವೈವಿಧ್ಯ ಮಂಡಳಿ

(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ)

राष्ट्रीय जैव विविधता प्राधिकरण
National Biodiversity Authority, India
2003

22 ಮೇ 2020
ಅಂತರರಾಷ್ಟ್ರೀಯ
ಜೀವವೈವಿಧ್ಯ ದಿನಾಚರಣೆ
ಸಮಸ್ಯೆಗಳಿಗೆ ಪರಿಹಾರ ನಿಸರ್ಗದಲ್ಲೇ ಇದೆ

ಕರ್ನಾಟಕ ಜೀವವೈವಿಧ್ಯ ಮಂಡಳಿ



## ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ ಹಾಗೂ
## ಜೀವವೈವಿಧ್ಯ ಸಂರಕ್ಷಣೆ ಜಾಗೃತಿ ಅಭಿಯಾನ ಕಾರ್ಯಕ್ರಮಗಳ ಸಚಿತ್ರ ಸಂಕ್ಷಿಪ್ತ ವರದಿ

# ಪರಿವಿಡಿ


| ಸಂಖ್ಯೆ | ವಿವರ | ಪುಟ |
|---|---|---|
| **1.** | **ಅಧ್ಯಕ್ಷರ ನುಡಿ.** | 1 |
| **2.** | **ದಿನಾಂಕ 22, ಮೇ 2020ರಂದು ಬೆಂಗಳೂರಿನಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಜರುಗಿದ ರಾಜ್ಯ ಮಟ್ಟದ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಪ್ರಧಾನ ಕಾರ್ಯಕ್ರಮದ ವರದಿ.** | 2–4 |
| **3.** | **ರಾಜ್ಯಾದ್ಯಂತ ನಡೆದ ಜೀವವೈವಿಧ್ಯ ಸಂರಕ್ಷಣೆ ಜಾಗೃತಿ ಅಭಿಯಾನದ ಜಿಲ್ಲಾವಾರು ವರದಿ.** | –– |
| | 1. ಶಿವಮೊಗ್ಗ ಜಿಲ್ಲೆ | 5–13 |
| | 2. ಉತ್ತರ ಕನ್ನಡ ಜಿಲ್ಲೆ | 14–16 |
| | 3. ಬೆಂಗಳೂರು ನಗರ ಜಿಲ್ಲೆ | 17 |
| | 4. ಬೆಂಗಳೂರು ಗ್ರಾಮಾಂತರ ಜಿಲ್ಲೆ | 18 |
| | 5. ರಾಮನಗರ ಜಿಲ್ಲೆ | 19 |
| | 6. ತುಮಕೂರು ಜಿಲ್ಲೆ | 20 |
| | 7. ಚಿಕ್ಕಮಗಳೂರು ಜಿಲ್ಲೆ | 21 |
| | 8. ದಾವಣಗೆರೆ ಜಿಲ್ಲೆ | 22 |
| | 9. ಮಡಿಕೇರಿ ಜಿಲ್ಲೆ | 22–23 |
| | 10. ಬೆಳಗಾವಿ ಜಿಲ್ಲೆ | 23–24 |
| | 11. ಉಡುಪಿ ಜಿಲ್ಲೆ | 25 |
| | 12. ಹಾಸನ ಜಿಲ್ಲೆ | 25 |
| | 13. ಕಲಬುರಗಿ ಜಿಲ್ಲೆ | 26 |
| | 14. ಬಳ್ಳಾರಿ ಜಿಲ್ಲೆ | 26 |
| **4.** | **ಅನುಬಂಧ** | –– |
| | ಮೇ,22ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಮುಖರು. | 27 |
| | ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಸಂಘಟಿಸಿದ ಸರ್ಕಾರಿ ಇಲಾಖೆಗಳು, ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳು. | 27–28 |
| | ರಾಜ್ಯಾದ್ಯಂತ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಮುಖ ಜನಪ್ರತಿನಿಧಿಗಳು, ಅಧಿಕಾರಿಗಳು, ತಜ್ಞರು ಹಾಗೂ ನಾಗರೀಕರ ಹೆಸರುಗಳು. | 28–30 |
| | ಪತ್ರಿಕಾ ವರದಿಗಳು. | 31–35 |

# ಅಧ್ಯಕ್ಷರ ನುಡಿ

ಸುಸ್ಥಿರ ಅಭಿವೃದ್ಧಿಯೆಡೆಗೆ ಹೆಚ್ಚುತ್ತಿರುವ ವಿಶ್ವಸಮುದಾಯಗಳ ಬದ್ಧತೆಯಿಂದ ಪ್ರೇರಿತವಾಗಿ 22ನೇ ಮೇ, 1992ರಲ್ಲಿ ವಿಶ್ವ ಸಂಸ್ಥೆಯು ಜೀವವೈವಿಧ್ಯ ಸಮಾವೇಶವನ್ನು (ರಿಯೋ ಶೃಂಗಸಭೆ) ವಿಶ್ವದ ರಾಷ್ಟ್ರಗಳ ಸಹಿಗಾಗಿ ಮಂಡಿಸಿರುತ್ತದೆ. ಭಾರತ ಸರ್ಕಾರವು 1994ರಲ್ಲಿ ಸದರಿ ಸಮಾವೇಶಕ್ಕೆ ರುಜು ಹಾಕುವ ಮೂಲಕ ತನ್ನ ರಾಷ್ಟ್ರದ ಜೈವಿಕ ಸಂಪನ್ಮೂಲಗಳ ಮೇಲಿನ ಸಾರ್ವಭೌಮ ಹಕ್ಕುಗಳನ್ನು ಸ್ಥಾಪಿಸಿ ಘೋಷಣೆ ಮಾಡಿರುತ್ತದೆ. ಈ ಮಧ್ಯೆ, 1992ರಲ್ಲಿ ಜಾರಿಗೆ ತರಲಾದ ಜೀವವೈವಿಧ್ಯ ಸಮಾವೇಶದ ಸ್ಮರಣೆಯಂತೆ, ಅರಿವು ಹಾಗೂ ಜನಜಾಗೃತಿ ಮೂಡಿಸಲು ವಿಶ್ವಸಂಸ್ಥೆಯು ಮೇ ಮಾಹೆಯ 22ನೇ ದಿನವನ್ನು ವಿಶ್ವದೆಲ್ಲೆಡೆ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನ ಎಂದು ಆಚರಿಸಲು ಘೋಷಿಸಿರುತ್ತದೆ.

ನಮ್ಮ ಬದುಕನ್ನು ಪೋಷಿಸುವ ಅನೇಕ ಬಗೆಯ ಸಸ್ಯ, ಪ್ರಾಣಿ ಹಾಗೂ ಸೂಕ್ಷ್ಮಾಣುಜೀವಿಗಳು ಮತ್ತು ಅವು ನಿರ್ಮಿಸುವ ಪರಿಸರದ ಮಹತ್ವವನ್ನು ಸಾರುವ ಹಾಗೂ ಅದರ ಕುರಿತಾಗಿ ಜನಜಾಗೃತಿ ಮೂಡಿಸುವುದೇ ಈ ಆಚರಣೆಯ ಪ್ರಮುಖ ಉದ್ದೇಶ. ನಮ್ಮ ದೇಶದಲ್ಲಿ ಕೇಂದ್ರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಹಾಗೂ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಆಶ್ರಯದಲ್ಲಿ ದೇಶದಾದ್ಯಂತ ಈ ದಿನಾಚಾರಣೆಯನ್ನು ಹಲವು ಮಜಲುಗಳಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. ಜೀವವೈವಿಧ್ಯ ಸಂರಕ್ಷಣೆಯ ಅಪಾರ ಮಹತ್ವವನ್ನು ಮನಗಂಡು, ಸನ್ಮಾನ್ಯ ಪ್ರಧಾನ ಮಂತ್ರಿಗಳ ಪ್ರಧಾನ ವೈಜ್ಞಾನಿಕ ಸಲಹೆಗಾರರ ಮಾರ್ಗದರ್ಶನದಲ್ಲಿ ರಾಷ್ಟ್ರಮಟ್ಟದ ವಿಶೇಷ **"ಜೀವವೈವಿಧ್ಯ ಮಿಶನ್"**ಗೆ ಕೂಡ ಚಾಲನೆ ನೀಡಲಾಗಿದೆ. ಹೀಗಾಗಿ, ಜೀವವೈವಿಧ್ಯತೆಯನ್ನು ಸಂರಕ್ಷಿಸಬೇಕಾದ ಜಾಗೃತಿ ಎಲ್ಲೆಡೆ ಮೂಡುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಈ ದಿನಾಚರಣೆಯನ್ನು ಆಚರಿಸುತ್ತಾ ಬಂದಿರುತ್ತದೆ. ಪ್ರಸ್ತುತ ವರ್ಷದಲ್ಲಿ ವಿಶೇಷ ಆಸಕ್ತಿ ವಹಿಸಿ, ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ರಾಜ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳ ಸಹಭಾಗಿತ್ವದೊಂದಿಗೆ ಆಚರಿಸಲಾಗಿದೆ. ಕೋವಿಡ್–19 ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಸರ್ಕಾರವು ವಿಧಿಸಿರುವ ಸುರಕ್ಷತೆಯ ಮಾರ್ಗಸೂಚಿಗಳನ್ನು ಅನುಸರಿಸುತ್ತ, ರಾಜ್ಯದಲ್ಲಿ ಸಣ್ಣ–ಸಣ್ಣ ಚಟುವಟಿಕೆಗಳನ್ನು ಸಂಘಟಿಸುವ ಮೂಲಕವೇ ಇದನ್ನು ಆಚರಿಸಿ ಉದ್ದೇಶಿಸಲಾಗಿದೆ. ಈ ರೀತಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ಅನೇಕ ಶ್ರೇಣಿಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜೀವವೈವಿಧ್ಯತೆಯ ಬಗೆ ಸಾಕಷ್ಟು ಅರಿವು ಮೂಡಿಸಲಾಗಿದೆ. ಹಮ್ಮಿಕೊಂಡ ಕಾರ್ಯಕ್ರಮಗಳ ಚಿತ್ರಾತ್ಮಕ ಸಾರಾಂಶವನ್ನು ಈ ಪ್ರಕಟಣೆಯಲ್ಲಿ ಮಂಡಿಸಿದೆ.

ಅನಂತ ಹೆಗಡೆ ಅಶೀಸರ


**ಆಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ**

# ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಪ್ರಧಾನ ಕಾರ್ಯಕ್ರಮದ ವರದಿ

ದಿನಾಂಕ 22, ಮೇ 2020ರಂದು ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪರವರು ತಮ್ಮ ಗೃಹ ಕಛೇರಿಯಲ್ಲಿ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಗೆ ಚಾಲನೆ ನೀಡಿದರು. ಶ್ರೀ ಆನಂದ್ ಸಿಂಗ್, ಮಾನ್ಯ ಅರಣ್ಯ ಸಚಿವರು; ಶ್ರೀ ಅನಂತ ಹೆಗಡೆ ಅಶೀಸರ, ಮಾನ್ಯ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ; ಶ್ರೀ ಸಂದೀಪ್ ದವೆ, ಸರ್ಕಾರದ ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ; ಶ್ರೀ ವಿಜಯ್ ಕುಮಾರ್ ಗೋಗಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ; ಶ್ರೀ ಸಂಜಯ್ ಮೋಹನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಇಲಾಖೆ; ಶ್ರೀ ಅಜಯ್ ಮಿಶ್ರಾ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ ಪರಿಪಾಲಕರು), ಅರಣ್ಯ ಇಲಾಖೆ; ಶ್ರೀ ವಿರೇಂದರ್ ಸಿಂಗ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ ಮತ್ತು ಮಂಡಳಿಯ ಸಿಬ್ಬಂದಿಯ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಸಲಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಮಂಡಳಿಯ ಹಲವಾರು ಸಂಶೋಧನಾ ವರದಿಗಳು, ಕರಪತ್ರಗಳ ಬಿಡುಗಡೆಯೊಂದಿಗೆ ಮಂಡಳಿಯ ನವೀಕೃತ ಜಾಲತಾಣಕ್ಕೆ ಚಾಲನೆ ನೀಡಲಾಗಿದೆ. ಜೀವವೈವಿಧ್ಯ ದಿನಾಚರಣೆಯ ಅಂಗವಾಗಿ ಆಯೋಜಿಸಿದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ, ಜೀವವೈವಿಧ್ಯತೆಯ ಸಂರಕ್ಷಣೆಗೆ ವಿಶೇಷ ಕೊಡುಗೆ ನೀಡಿರುವ ವ್ಯಕ್ತಿಗಳನ್ನು ಸನ್ಮಾನಿಸಿ ರಾಜ್ಯ ಜೀವವೈವಿಧ್ಯ ಪ್ರಶಸ್ತಿಯನ್ನು ನೀಡಲಾಯಿತು.



ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗಣ್ಯರಿಂದ ಸಂಶೋಧನಾ ವರದಿಗಳು
ಮತ್ತು ಕರಪತ್ರಗಳ ಬಿಡುಗಡೆ



ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಮಂಡಳಿಯ ನವೀಕೃತ ಜಾಲತಾಣದ ಚಾಲನೆ




ಮಂಡಳಿಯ ನವೀಕೃತ ಜಾಲತಾಣ



ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಶ್ರೀ ಶ್ರೀಪಾದ ಬಿಚ್ಚುಗತ್ತಿರವರಿಗೆ ರಾಜ್ಯ ಜೀವವೈವಿಧ್ಯ ಪ್ರಶಸ್ತಿ ಪ್ರಧಾನ



ಮಾನ್ಯ ಅರಣ್ಯ ಸಚಿವರಿಂದ ಚೆಕ್ ವಿತರಣೆ

## ರಾಜ್ಯಾದ್ಯಂತ ನಡೆದ ಜೀವವೈವಿಧ್ಯ ಸಂರಕ್ಷಣೆ ಜಾಗೃತಿ ಅಭಿಯಾನದ ಜಿಲ್ಲಾವಾರು ವರದಿ

ಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರರವರ ಅಧ್ಯಕ್ಷತೆಯಲ್ಲಿ ಹಾಗೂ ನೇತೃತ್ವದಲ್ಲಿ ದಿನಾಂಕ ಮೇ 22, 2020ರಿಂದ ಜೂನ್ 5, 2020ರವರೆಗೆ ಹಮ್ಮಿಕೊಳ್ಳಲಾದ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಅಭಿಯಾನದಲ್ಲಿ ಮಂಡಳಿಯ ಸಂಶೋಧನಾ/ತಾಂತ್ರಿಕ ಸಿಬ್ಬಂದಿ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಕೈಗೊಂಡ ವಿವಿಧ ಕ್ಷೇತ್ರ ಭೇಟಿ ಕಾರ್ಯಕ್ರಮಗಳ ಚಿತ್ರಣ.





ದಿನಾಂಕ 24.05.2020ರಂದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೈತೋಟ ಗ್ರಾಮದ ಕಾಡಿನಕೆರೆ ಪುನಶ್ಚೇತನ ಅಭಿಯಾನ



ದಿನಾಂಕ 15.06.2020ರಂದು ಚೈತನ್ಯ ವಿಶೇಷ ಶಿಕ್ಷಣ ಶಾಲೆ, ಭೀಮನಕೋಣೆ, ಮುಂಗರವಳ್ಳಿ, ಶಿವಮೊಗ್ಗದಲ್ಲಿ ಮಾಜಿ ಶಾಸಕರಾದ ಶ್ರೀ ಹರತಾಳು ಹಾಲಪ್ಪನವರ ಸಮ್ಮುಖದಲ್ಲಿ ವೃಕ್ಷಾರೋಪಣ




ಅಭಿಯಾನದಲ್ಲಿ ಸಂರಕ್ಷಣೆಯ ಬಗ್ಗೆ ಉದ್ದೇಶಿಸಿ ಜನಜಾಗೃತಿ ಮೂಡಿಸಿದ ಮಾನ್ಯ ಅಧ್ಯಕ್ಷರು



ದಿನಾಂಕ 15.06.2020ರಂದು ತುಮರಿಯ ಕಳಸವಳ್ಳಿಯಲ್ಲಿನ ಜೀವವೈವಿಧ್ಯ ವನದಲ್ಲಿ ವೃಕ್ಷಾರೋಪಣದಿಂದ ಅಭಿಯಾನದ ಚಾಲನೆ



ಜೀವವೈವಿಧ್ಯ ವನದ ಸಂರಕ್ಷಣೆ ಹಾಗೂ ಪುನಶ್ಚೇತನದ ಬಗ್ಗೆ ಸ್ಥಳೀಯರೊಂದಿಗೆ ಚರ್ಚೆ



ದಿನಾಂಕ 15.06.2020ರಂದು ಜೀವವೈವಿಧ್ಯ ಅಭಿಯಾನದ ಸಮಯದಲ್ಲಿ ಸಾಗರ ತಾಲ್ಲೂಕಿನ ಶರಾವತಿ ಕಣಿವೆಯ ಭೂಕುಸಿತ ಪ್ರದೇಶಕ್ಕೆ ಭೇಟಿ ನೀಡಿ ಭೂಗರ್ಭ ಪರಿಣಿತರೊಂದಿಗೆ ಅಧ್ಯಯನ



ಭೂಕುಸಿತದಿಂದ ಬೆಳೆ ಹಾನಿಗೊಳಗಾದ ರೈತರ ಮನೆಯಲ್ಲಿ ಜಿಲ್ಲಾ ಉಪ ವಿಭಾಗಾಧಿಕಾರಿಗಳೊಂದಿಗೆ ವಿಪತ್ತಿನ ನಿರ್ವಹಣೆ ಹಾಗೂ ಅವಶ್ಯ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಚರ್ಚೆ




ದಿನಾಂಕ 15.06.2020ರಂದು ಅಂಬಾರಗುಡ್ಡ ಜೀವವೈವಿಧ್ಯ ಪಾರಂಪರಿಕ ತಾಣದ ಸಂಕಣ್ಣ ಶಾನುಭೋಗ ಗ್ರಾಮ ಪಂಚಾಯತಿಯಲ್ಲಿ ವೃಕ್ಷಾರೋಪಣ ಹಾಗೂ ಜೀವವೈವಿಧ್ಯ ಅಭಿಯಾನ




ಅಂಬಾರಗುಡ್ಡ ತಾಣದ ಸಂರಕ್ಷಣೆ ಅಭಿಯಾನ ಹಾಗೂ ಸಂರಕ್ಷಣಾಭಿವೃದ್ಧಿಯ ಬಗ್ಗೆ ಜೀವವೈವಿಧ್ಯ ನಿರ್ವಹಣಾ ಸಮಿತಿಯೊಂದಿಗೆ ಚರ್ಚೆ







ದಿನಾಂಕ 15.06.2020ರಂದು ನಿಟ್ಟೂರು (ನಾಗೋಡಿ) ಗ್ರಾಮ ಪಂಚಾಯತಿಯ ಜೀವವೈವಿಧ್ಯ ನಿರ್ವಹಣಾ ಸಮಿತಿಯೊಂದಿಗೆ ಸೂಕ್ಷ್ಮ ಪ್ರದೇಶಗಳ ಸಂರಕ್ಷಣೆಯ ಚರ್ಚೆ ಹಾಗೂ ಅಭಿಯಾನ







ದಿನಾಂಕ 15.06.2020ರಂದು ಹನಿಯಾ ಗ್ರಾಮದಲ್ಲಿ ವೃಕ್ಷಾರೋಪಣದೊಂದಿಗೆ ಸಂರಕ್ಷಣೆ ಹಾಗೂ ಜಾಗೃತಿ ಅಭಿಯಾನ







ದಿನಾಂಕ 15.06.2020ರಂದು ರಾಮಚಂದ್ರಾಪುರ ಮಠದ ವ್ಯಾಪ್ತಿಯಲ್ಲಿ ಕೈಗೊಂಡ ಅಭಿಯಾನದಲ್ಲಿ ವೃಕ್ಷಾರೋಪಣೆ




ದಿನಾಂಕ 15.06.2020ರಂದು ಹೊಸನಗರ ತಾಲ್ಲೂಕು ಪಂಚಾಯತಿ, ಜೀವವೈವಿಧ್ಯ ಸಮಿತಿಯೊಂದಿಗೆ ಅಭಿಯಾನದಲ್ಲಿ ಮಾನ್ಯ ಅಧ್ಯಕ್ಷರು, ಅರಣ್ಯ ಅಧಿಕಾರಿಗಳು ಹಾಗೂ ಮಂಡಳಿಯ ಸಿಬ್ಬಂದಿ




ದಿನಾಂಕ 15.06.2020ರಂದು ಹೊಸನಗರ ತಾಲ್ಲೂಕಿನ ಕೋಡೂರು ಗ್ರಾಮ ಪಂಚಾಯತಿ ಅಭಿಯಾನದಲ್ಲಿ ಅಮ್ಮನಘಟ್ಟ ಸೂಕ್ಷ್ಮ ಪ್ರದೇಶವನ್ನು ಪಾರಂಪರಿಕ ತಾಣವಾಗಿ ಸಂರಕ್ಷಿಸಲು ನಿರ್ಣಯ.

<u>ಉತ್ತರ ಕನ್ನಡ ಜಿಲ್ಲೆ</u>




ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಅಭಿಯಾನ ಹಾಗೂ ಮಂಡಳಿಯ ಪ್ರಕಟಣೆಗಳ ಬಿಡುಗಡೆ




ಯಲ್ಲಾಪುರದ ಸಭೆಯಲ್ಲಿ ಶ್ರೀ ಶಾಂತಾರಾಂ ಸಿದ್ಧಿರವರಿಗೆ ರಾಜ್ಯ ಜೀವವೈವಿಧ್ಯ ಪ್ರಶಸ್ತಿ ಪ್ರಧಾನ.




ದಿನಾಂಕ 04.06.2020ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಬೆಟ್ಟಗಳ ಸಂರಕ್ಷಣೆಯ ಬಗ್ಗೆ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಮಾಲೋಚನಾ ಸಭೆ




ದಿನಾಂಕ 04.06.2020ರಂದು ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಶಿರಸಿಯ ಸೋಂದಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಮುಂಡಿಗೆಕೆರೆಯ ಸಂರಕ್ಷಣೆ ಅಭಿಯಾನ




ಶಿರಸಿ ತಾಲ್ಲೂಕಿನ, ಮಂಜಗುಣಿ ಗ್ರಾಮ ಅರಣ್ಯ ಸಮಿತಿಯ ಸಭೆಯನ್ನು ಉದ್ಘಾಟಿಸಿದ
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್, ಕರ್ನಾಟಕ ಸರ್ಕಾರ.




ಮಂಜಗುಣಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯ ಪವಿತ್ರವನ ಹಾಗೂ ದೇವರಕಾಡಿನ ಉದ್ಘಾಟನೆ.

# <u>ಬೆಂಗಳೂರು ನಗರ ಜಿಲ್ಲೆ</u>







ದಿನಾಂಕ 05.05.2020 ರಂದು ಜೀವವೈವಿಧ್ಯತೆಯ ಸಂರಕ್ಷಣೆ, ಭೂ ಕುಸಿತ ತಡೆ ಹಾಗೂ ನಿರ್ವಹಣೆಗಾಗಿ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ 'ಭೂಕುಸಿತ ನಿರ್ವಹಣೆ ಪರಿಣಿತರ ಸಮಿತಿಯ' ಸಭೆ.

<u>ಬೆಂಗಳೂರು ಗ್ರಾಮಾಂತರ ಜಿಲ್ಲೆ</u>






ದಿನಾಂಕ 22.05.2020 ರಂದು ದೇವನಹಳ್ಳಿ ತಾಲ್ಲೂಕಿನ ನಲ್ಲೂರು ಹುಣಸೆತೋಪು ಜೀವವೈವಿಧ್ಯ ಪಾರಂಪರಿಕ ತಾಣದಲ್ಲಿ ಅರಣ್ಯ ಇಲಾಖೆ ಆಯೋಜಿಸಿದ್ದ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ.

<u>ರಾಮನಗರ ಜಿಲ್ಲೆ</u>






ದಿನಾಂಕ 30.05.2020ರಂದು ರಾಮನಗರದಲ್ಲಿ ಮಂಡಳಿಯ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಜೀವವೈವಿಧ್ಯ ಅಭಿಯಾನ, ಸಮಾಲೋಚನಾ ಸಭೆ ಹಾಗೂ ವರದಿ ಬಿಡುಗಡೆ

# <u>ತುಮಕೂರು ಜಿಲ್ಲೆ</u>







ದಿನಂಕ 21.05.2020 ರಂದು ತುಮಕೂರು ಸಿದ್ಧಗಂಗಾ ಮಠದಲ್ಲಿ ಪರಮಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿಗಳಿಂದ ವೃಕ್ಷಾರೋಪಣೆ ಹಾಗೂ ಸಂರಕ್ಷಣಾ ಅಭಿಯಾನದ ಚಾಲನೆ

<u>ಚಿಕ್ಕಮಗಳೂರು ಜಿಲ್ಲೆ</u>




ದಿನಾಂಕ 06.06.2020ರಂದು ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದಲ್ಲಿ ಅಭಿಯಾನ ಹಾಗೂ ರೈತಬಾಂದವರಿಗೆ ಸಸಿಗಳ ವಿತರಣೆ.




ದಿನಾಂಕ 06.06.2020ರಂದು ಚಿಕ್ಕಮಗಳೂರು ಜಿಲ್ಲೆಯ ಭೂಕುಸಿತ ಪ್ರದೇಶಕ್ಕೆ ಭೇಟಿ ನೀಡಿ ಭೂಗರ್ಭ ಪರಿಣಿತರೊಂದಿಗೆ ಅಧ್ಯಯನ

<u>ದಾವಣಗೆರೆ ಜಿಲ್ಲೆ</u>




ಜಿಲ್ಲಾ ಪಂಚಾಯತಿ, ದಾವಣಗೆರೆ

<u>ಮಡಿಕೇರಿ ಜಿಲ್ಲೆ</u>




ಜಿಲ್ಲಾ ಪಂಚಾಯತಿ ಸಭಾಂಗಣ, ಮಡಿಕೇರಿ




ಪೊನ್ನಂಪೇಟೆ ತಾಲ್ಲೂಕು, ಮಡಿಕೇರಿ

## <u>ಬೆಳಗಾವಿ ಜಿಲ್ಲೆ</u>




ಧುಪದಾಳ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ



ಚಂದರಗಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ



ಸತ್ತಿಗೇರಿ ಗ್ರಾಮ ಪಂಚಾಯತಿ, ಸವದತ್ತಿ ತಾಲ್ಲೂಕು, ಬೆಳಗಾವಿ

<u>ಉಡುಪಿ ಜಿಲ್ಲೆ</u>




ಉಡುಪಿ ಜಿಲ್ಲೆಯಲ್ಲಿ ವೃಕ್ಷಾರೋಪಣೆ

<u>ಹಾಸನ ಜಿಲ್ಲೆ</u>



ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ

# <u>ಕಲಬುರಗಿ ಜಿಲ್ಲೆ</u>




ಅಳಂದ ತಾಲ್ಲೂಕು, ಕಲಬುರಗಿ

# <u>ಬಳ್ಳಾರಿ ಜಿಲ್ಲೆ</u>



ಬಳ್ಳಾರಿ ತಾಲ್ಲೂಕು ಪಂಚಾಯತಿ, ಬಳ್ಳಾರಿ

# ಅನುಬಂಧ

ಮೇ.22ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಮುಖರು:

1. ಶ್ರೀ ಬಿ.ಎಸ್. ಯಡಿಯೂರಪ್ಪನವರು, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.
2. ಶ್ರೀ ಆನಂದ್ ಸಿಂಗ್‌ರವರು, ಮಾನ್ಯ ಅರಣ್ಯ ಸಚಿವರು, ಕರ್ನಾಟಕ ಸರ್ಕಾರ.
3. ಶ್ರೀ ಅನಂತ ಹೆಗಡೆ ಅಶೀಸರರವರು, ಮಾನ್ಯ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ.
4. ಶ್ರೀ ಸಂದೀಪ್ ದವೆ, ಸರ್ಕಾರದ ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.
5. ಶ್ರೀ ವಿಜಯ್ ಕುಮಾರ್ ಗೋಗಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.
6. ಶ್ರೀ ಸಂಜಯ್ ಮೋಹನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಇಲಾಖೆ.
7. ಶ್ರೀ ಅಜಯ್ ಮಿಶ್ರಾ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮುಖ್ಯ ವನ್ಯಜೀವಿ ಪರಿಪಾಲಕರು), ಅರಣ್ಯ ಇಲಾಖೆ.
8. ಶ್ರೀ ವಿರೇಂದರ್ ಸಿಂಗ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ.

ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಸಂಘಟಿಸಿದ ಸರ್ಕಾರಿ ಇಲಾಖೆಗಳು, ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳು:

1. ಕರ್ನಾಟಕ ರಾಜ್ಯ ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ.
2. ಪ್ರಾದೇಶಿಕ ಅರಣ್ಯ ವಿಭಾಗ, ಶಿವಮೊಗ್ಗ ಜಿಲ್ಲೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ.
3. ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ ಜಿಲ್ಲೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ.
4. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.
5. ಜಿಲ್ಲಾ ಪಂಚಾಯತಿ, ಶಿವಮೊಗ್ಗ ಜಿಲ್ಲೆ.
6. ಜೀವವೈವಿಧ್ಯ ನಿರ್ವಹಣಾ ಸಮಿತಿ, ಕೈತೋಟ ಗ್ರಾಮ ಪಂಚಾಯತಿ, ಸಾಗರ ತಾಲ್ಲೂಕು.
7. ಚೈತನ್ಯ ವಿಷೇಶ ಶಿಕ್ಷಣ ಶಾಲೆ(ರಿ), ಭೀಮನಕೋಣೆ, ಮುಂಗರವಳ್ಳಿ, ಸಾಗರ ತಾಲ್ಲೂಕು.
8. ಜೀವವೈವಿಧ್ಯ ನಿರ್ವಹಣಾ ಸಮಿತಿ, ಸಂಕಣ್ಣ ಶಾನುಭೋಗ ಗ್ರಾಮ ಪಂಚಾಯತಿ, ಸಾಗರ ತಾಲ್ಲೂಕು.

9. ಜೀವವೈವಿಧ್ಯ ನಿರ್ವಹಣಾ ಸಮಿತಿ, ಹನಿಯಾ ಗ್ರಾಮ ಪಂಚಾಯತಿ, ಸಾಗರ ತಾಲ್ಲೂಕು.
10. ಜೀವವೈವಿಧ್ಯ ನಿರ್ವಹಣಾ ಸಮಿತಿ, ಹೊಸನಗರ ತಾಲ್ಲೂಕು ಪಂಚಾಯತಿ, ಹೊಸನಗರ ತಾಲ್ಲೂಕು.
11. ಜೀವವೈವಿಧ್ಯ ನಿರ್ವಹಣಾ ಸಮಿತಿ, ನಿಟ್ಟೂರು (ನಾಗೋಡಿ) ಗ್ರಾಮ ಪಂಚಾಯತಿ, ಹೊಸನಗರ ತಾಲ್ಲೂಕು.
12. ವಲಯ ಅರಣ್ಯ ಅಧಿಕಾರಿ, ಶಿವಮೊಗ್ಗ ವೃತ್ತ, ಹೊಸನಗರ ಉಪವಿಭಾಗ, ಹೊಸನಗರ.
13. ಜೀವವೈವಿಧ್ಯ ನಿರ್ವಹಣಾ ಸಮಿತಿ, ಹನಿಯಾ ಗ್ರಾಮ ಪಂಚಾಯತಿ, ಹೊಸನಗರ ತಾಲ್ಲೂಕು.
14. ಶ್ರೀಶೈವ ರಾಮಚಂದ್ರಾಪುರ ಮಠ, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
15. ತಾಲ್ಲೂಕು ಪಂಚಾಯತಿ, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
16. ತಾಲ್ಲೂಕು ಪಂಚಾಯತಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
17. ಜೀವವೈವಿಧ್ಯ ನಿರ್ವಹಣಾ ಸಮಿತಿ, ಸೋಂದಾ ಗ್ರಾಮ ಪಂಚಾಯತಿ, ಶಿರಸಿ ತಾಲ್ಲೂಕು.
18. ಗ್ರಾಮ ಅರಣ್ಯ ಸಮಿತಿಯ, ಮಂಜಗುಣಿ, ಶಿರಸಿ ತಾಲ್ಲೂಕು.
19. ಅರಣ್ಯ ಭವನ, ಬೆಂಗಳೂರು.
20. ಜೀವವೈವಿಧ್ಯ ನಿರ್ವಹಣಾ ಸಮಿತಿ, ನಲ್ಲೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಂಮಾಂತರ ಜಿಲ್ಲೆ.
21. ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
22. ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ.
23. ಜಿಲ್ಲಾ ಪಂಚಾಯತಿ, ಮಡಿಕೇರಿ ಜಿಲ್ಲೆ.
24. ಅರಣ್ಯ ಶಿಕ್ಷಣ ಕಾಲೇಜು, ಪೊನ್ನಂಪೇಟೆ
25. ಧುಪದಾಳ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ.
26. ಜೀವವೈವಿಧ್ಯ ನಿರ್ವಹಣಾ ಸಮಿತಿ, ಧುಪದಾಳ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ.
27. ಚಂದರಗಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ.
28. ಜೀವವೈವಿಧ್ಯ ನಿರ್ವಹಣಾ ಸಮಿತಿ, ಚಂದರಗಿ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ.

ರಾಜ್ಯಾದ್ಯಂತ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಮುಖ ಜನಪ್ರತಿನಿಧಿಗಳು, ಅಧಿಕಾರಿಗಳು, ತಜ್ಞರು ಹಾಗೂ ನಾಗರೀಕರ ಹೆಸರುಗಳು

1. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್, ಕರ್ನಾಟಕ ಸರ್ಕಾರ.
2. ಶ್ರೀ ಹರತಾಳು ಹಾಲಪ್ಪ, ಮಾಜಿ ಶಾಸಕರು, ಸೊರಬ ಕ್ಷೇತ್ರ, ಶಿವಮೊಗ್ಗ.
3. ಪರಮಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿಗಳು, ಸಿದ್ಧಗಂಗಾ ಮಠ, ತುಮಕೂರು.

4. ಶ್ರೀ ನಾಗರಾಜ್, ಜಿಲ್ಲಾ ಉಪ ವಿಭಾಗಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ.
5. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
6. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
7. ಜಿಲ್ಲಾ ಉಪ ವಿಭಾಗಾಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
8. ಜಿಲ್ಲಾ ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
9. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ.
10. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ಮಡಿಕೇರಿ ಜಿಲ್ಲೆ.
11. ಶ್ರೀ ಬ್ರಿಜೇಶ್ ಕುಮಾರ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ದಿ), ಅರಣ್ಯ ಇಲಾಖೆ.
12. ಶ್ರೀ ಮೊಹನ್ ಕುಮಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ಅರಣ್ಯ ವಿಭಾಗ, ಶಿವಮೊಗ್ಗ ಜಿಲ್ಲೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ.
13. ಶ್ರೀ ಶಿವರಾಮ್ ಬಾಬು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಬಳ್ಳಾರಿ ಜಿಲ್ಲೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ.
14. ಶ್ರೀ ದೇಸಾಯಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ ಜಿಲ್ಲೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ.
15. ಶ್ರೀ ಕಿರಣ್ ಎಮ್.ಎನ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಬಳ್ಳಾರಿ ಜಿಲ್ಲೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ.
16. ಶ್ರೀ ಸುಬ್ಬು ರಾವ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ಅರಣ್ಯ, ದೊಡ್ಡಬಳ್ಳಾಪುರ ವಿಭಾಗ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ.
17. ಡಾ॥ ಶ್ರೀನಿವಾಸ್ ರೆಡ್ಡಿ, ನಿರ್ದೇಶಕರು, ಕರ್ನಾಟಕ ರಾಜ್ಯ ಪರಿಸಾರಿಕ ವಿಪತ್ತು ಮೇಲಿಚಾರಣಾ ಕೇಂದ್ರ, ಯಲಹಂಕ, ಬೆಂಗಳೂರು.
18. ಡಾ॥ ಟಿ.ವಿ. ರಾಮಚಂದ್ರ, ಸಂಯೋಜಕರು, ಪರಿಸರ ವಿಜ್ಞಾನ ಕೇಂದ್ರ, ಭಾರತೀಯ ವಿಜ್ಞಾನ ಕೇಂದ್ರ, ಯಶವಂಥಪುರ, ಬೆಂಗಳೂರು.
19. ಡಾ॥ ಸಿ.ಜಿ. ಕುಶಲಪ್ಪ, ಪ್ರಾಧ್ಯಾಪಕರು ಮತ್ತು ಮುಖ್ಯಾಧಿಕಾರಿ, ಅರಣ್ಯ ಶಿಕ್ಷಣ ಕಾಲೇಜು, ಪೊನ್ನಂಪೇಟೆ ತಾಲ್ಲೂಕು, ಮಡಿಕೇರಿ.
20. ಡಾ॥ ಕೇಶವ ಹೆಚ್. ಕೋರ್ಸೆ, ಮಾನ್ಯ ಅಧ್ಯಕ್ಷರ ತಾಂತ್ರಿಕ ಸಲಹೆಗಾರರು ಮತ್ತ ಸಮಾಲೋಚಕರು, ಕರ್ನಾಟಕ ಜೀವವೈವಿಧ್ಯ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
21. ಶ್ರೀ ಶ್ರೀಧರ್ ಜೈನ್, ಅಧ್ಯಕ್ಷರು, ಜೀವವೈವಿಧ್ಯ ನಿರ್ವಹಣಾ ಸಮಿತಿ, ಸಂಕಣ್ಣ ಶಾನುಭೋಗ ಗ್ರಾಮ ಪಂಚಾಯತಿ.
22. ಶ್ರೀಮತಿ ಶಾಂತಲ, ಮುಖ್ಯಸ್ಥರು, ಚೈತನ್ಯ ವಿಷೇಶ ಶಿಕ್ಷಣ ಶಾಲೆ(ರಿ), ಭೀಮನಕೋಣೆ, ಮುಂಗರವಳ್ಳಿ, ಸಾಗರ ತಾಲ್ಲೂಕು.

23. ಅಧಿಕಾರಿಗಳು ಮತ್ತು ಸಿಬ್ಬಂದಿ, ಕರ್ನಾಟಕ ಜೀವವೈವಿಧ್ಯ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
24. ಶ್ರೀ ಆನೆಗುಳಿ ಸುಬ್ಬರಾವ್, ಸಾಗರ, ಶಿವಮೊಗ್ಗ.
25. ಶ್ರೀ ಅಶೋಕ್ ತುಮರಿ, ಸಾಗರ, ಶಿವಮೊಗ್ಗ.
26. ಶ್ರೀ ರಾಗವೇಂದ್ರ ಬೀಮನಕೋಣೆ, ಸಾಗರ, ಶಿವಮೊಗ್ಗ.
27. ಶ್ರೀ ವೆಂಕಟೇಶ್, ಸಾಗರ, ಶಿವಮೊಗ್ಗ.

<u>ಪತ್ರಿಕಾ ವರದಿಗಳು</u>

## ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ, 2020 ಹಾಗೂ ಜೀವವೈವಿಧ್ಯ ಸಂರಕ್ಷಣೆ ಅಭಿಯಾನದ ಕುರಿತಾದ ಪತ್ರಿಕಾ ಪ್ರಕಟಣೆಗಳು

ಪ್ರಜಾವಾಣಿ 31-05-2020

# 'ಜೀವ ವೈವಿಧ್ಯತೆ ಸಂರಕ್ಷಣೆ ಅಗತ್ಯ'

ಪ್ರಜಾವಾಣಿ ವಾರ್ತೆ

**ರಾಮನಗರ:** ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿರುವ ಜೀವ ವೈವಿಧ್ಯ ನಿರ್ವಹಣಾ ಸಮಿತಿ ಚುರುಕುಗೊಳಿಸಿ ಜಿಲ್ಲೆಯ ಜೀವ ವೈವಿಧ್ಯತೆ ಸಂರಕ್ಷಿಸಬೇಕು ಎಂದು ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಅಶೀಸರ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ರಾಜ್ಯದಾದ್ಯಂತ ಮೇ 22ರಿಂದ ಜೂನ್ 5ರ ವರೆಗೆ ಜೀವ ವೈವಿಧ್ಯ ಸಂರಕ್ಷಣೆ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಅಸಂಖ್ಯ ಬಗೆಯ ಸಸ್ಯ, ಪ್ರಾಣಿ ಹಾಗೂ ಸೂಕ್ಷಾಣು ಜೀವಿಗಳು ಪರಿಸರದಲ್ಲಿದೆ. ಅವುಗಳ ಮಹತ್ವ ತಿಳಿಸಿ ಜಾಗೃತಿ ಅಭಿಯಾನ ನಡೆಸಬೇಕು ಎಂದರು.

ಜಿಲ್ಲೆಯಲ್ಲಿ ಜೀವ ವೈವಿಧ್ಯತೆ ಹೊಂದಿರುವ ಸಣ್ಣ ಪ್ರದೇಶದಿಂದ ದೊಡ್ಡ ಪ್ರದೇಶ ಗುರುತಿಸಿ ವರದಿ ನೀಡಿದರೆ ಕರ್ನಾಟಕ ಜೀವ ವೈವಿಧ್ಯ ಮಂಡಳಿ ವತಿಯಿಂದ ಅದನ್ನು ಸಂರಕ್ಷಿಸಿ ಬಹಳಷ್ಟು ವರ್ಷ ಅದನ್ನು ಉಳಿಸುವ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.



ಕಾರ್ಯಕ್ರಮದಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಕೈಪಿಡಿ ಬಿಡುಗಡೆ ಮಾಡಿದರು

ನಿಷೇಧಿತ ಕೀಟನಾಶಕಗಳು ಹಾಗೂ ರಸಗೊಬ್ಬರ ಉಪಯೋಗಿಸುವುದರಿಂದ ಜೀವ ವೈವಿಧ್ಯತೆಯ ಮೇಲೆ ದುಷ್ಪರಿಣಾಮ ಬೀರಲಿದೆ. ತೋಟಗಾರಿಕೆ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಜಂಟಿ ಕೃಷಿ ನಿರ್ದೇಶಕ ರವಿ, ಜಿಲ್ಲೆಯಲ್ಲಿ ಇದನ್ನು ಪರಿಶೀಲಿಸಲು ಕೃಷಿ ಇಲಾಖೆಯಿಂದ ತಂಡವಿದ್ದು, ಅವರು ಪರಿಶೀಲನೆ ನಡೆಸುತ್ತಾರೆ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇಕ್ರಂ ಮಾತನಾಡಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಜೀವ ವೈವಿಧ್ಯತೆ ದಾಖಲಿಸಬೇಕು. ಈಗಾಗಲೇ 115 ಗ್ರಾಮ ಪಂಚಾಯಿತಿಗಳಲ್ಲಿ ಮಾಡಲಾಗಿದೆ. ಜೂನ್ ಅಂತ್ಯದೊಳಗಾಗಿ ಎಲ್ಲಾ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯಿಂದ ವರದಿ ಸಲ್ಲಿಸಲಾಗುವುದು ಎಂದರು.

ಉಪವಿಭಾಗಾಧಿಕಾರಿ ದಾಕ್ಷಾಯಿಣಿ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಉಮೇಶ್ ಇದ್ದರು.

ದಿನಂಕ 30.05.2020ರಂದು ರಾಮನಗರದಲ್ಲಿ ಮಂಡಳಿಯ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಜೀವವೈವಿಧ್ಯ ಅಭಿಯಾನ, ಸಮಾಲೋಚನಾ ಸಭೆ ಹಾಗೂ ವರದಿ ಬಿಡುಗಡೆ

# Special workshop on environment tomorrow

YELLAPUR, DHNS

Karnataka State Biodiversity Board Chairman Ananth Hegde Aashisar has said the board will organise a special workshop on the environment on January 7 on a pilot basis at Swarnavalli Mutt in the taluk.

Speaking to media persons here on Sunday, he said, the Bio-Diversity Board functions under the Forest Department. Along with social forestry, there are committees in various panchayats.

Apart from this, a system of ensuring profit to the public



Ananth Hegde Ashisar

through village forest committees has been already implemented, he added.

The 'Sasyaloka' has been constructed in the Swarnavalli Mutt 20 years ago. Along with its development, various programmes related to biodiversity including sacred forest have been organised in association with all respective departments, he informed.

The census of medicinal plants has been conducted in Yellapur region and the report of which will be released during the workshop to be held on January 7 at Swarnavalli.

Legislative Assembly Speaker Vishweshwar Hegde Kageri will take part in the programme.

Taluk Panchayat president Bhavya Shetty, Environmentalist B G Hegde Geral, Assistant Deputy Conservator of Forest Prashant PKM, Taluk Panchayat Executive Officer Jagadish Kammar, and Range Forest Officer Balasubramanya were present.

ಪರಿಸರ ಸಂರಕ್ಷಣೆ ಕುರಿತು ವಿಶೇಷ ಕಾರ್ಯಗಾರ

# ಶಿವಮೊಗ್ಗ

2 ಶನಿವಾರ • ಏಪ್ರಿಲ್ 25, 2020

## ಲಾಕ್‌ಡೌನ್: ಹೆಚ್ಚಿದ ಪ್ರಾಣಿಗಳ ಬೇಟೆ, ಮರಗಳವು

ಶಿವಮೊಗ್ಗ: 'ಲಾಕ್‌ಡೌನ್ ಸಮಯದಲ್ಲಿ ಕಾಡು ಪ್ರಾಣಿಗಳ ಬೇಟೆ, ಮರಗಳ ಕಳವು ಪ್ರಕರಣಗಳು ಹೆಚ್ಚಾಗಿವೆ. ಅರಣ್ಯ, ಕಂದಾಯ ಇಲಾಖೆಗಳಿಗೆ ನಿಗಾ ವಹಿಸಲು ಸೂಚಿಸಲಾಗಿದೆ' ಎಂದು ಪಶ್ಚಿಮಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಹೇಳಿದರು.

'ಅರಣ್ಯ ಪ್ರದೇಶದಲ್ಲಿ ಹೊಸ ಒತ್ತುವರಿ ತಡೆಯುವುದು, ಹಸಿರು ಪ್ರದೇಶದ ರಕ್ಷಣೆ, ಅರಣ್ಯಕ್ಕೆ ಬೆಂಕಿ ಬೀಳದಂತೆ ಎಚ್ಚರ ವಹಿಸಲು ತಿಳಿಸಲಾಗಿದೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಅನಂತ ಹೆಗಡೆ ಆಶೀಸರ

**ಭೂಕುಸಿತ ಅಧ್ಯಯನಕ್ಕೆ ಸಮಿತಿ:** 'ಮುಂಗಾರು ವೇಳೆ ರಾಜ್ಯದ ಹಲವೆಡೆ ಭೂಕುಸಿತಗಳು ಸಂಭವಿಸಿದ್ದವು. ಅಪಾರ ಹಾನಿಯಾಗಿತ್ತು. ಭೂ ಕುಸಿತದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ, ವರದಿ ಸಲ್ಲಿಸಲು ತಮ್ಮ ನೇತೃತ್ವದಲ್ಲಿ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿದೆ. ಸಮಿತಿ ಭೂಕುಸಿತ ಸಂಭವಿಸಿದ ಎಲ್ಲ ಪ್ರದೇಶಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ಎರಡು ತಿಂಗಳ ಒಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ' ಎಂದರು.


**ಮಂಗನ ಕಾಯಿಲೆ ನಿಯಂತ್ರಣ:** 'ಮಂಗನ ಕಾಯಿಲೆ ನಿಯಂತ್ರಣ ಕುರಿತು ಹಲವು ಇಲಾಖೆಗಳು ಪ್ರಯತ್ನ ನಡೆಸಿವೆ. ಸಂಶೋಧನೆಗಳು ಮುಂದುವರಿದಿವೆ. ತಜ್ಞರ ಸಭೆ ಕರೆದು, ಮಂಗನ ಕಾಯಿಲೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಮಾಲೋಚನೆ ನಡೆಸಲಾಗುವುದು' ಎಂದು ಮಾಹಿತಿ ನೀಡಿದರು.

'ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಹಸಿರು ವಲಯ ನಿರ್ಮಿಸಲು ಅನುದಾನ ಕಾಯ್ದಿರಿಸಲಾಗಿದೆ. ಹಸಿರೀಕರಣ ಕಾರ್ಯ ಜೂನ್ ತಿಂಗಳಲ್ಲಿ ಆರಂಭಿಸಲಾಗುವುದು. 'ಸೂಡಾ' ನಿರ್ಮಿತ ಬಡಾವಣೆಗಳ ವ್ಯಾಪ್ತಿಯಲ್ಲಿ ಸಸಿಗಳನ್ನು ನೆಡಲು ಸಲಹೆ ನೀಡಲಾಗಿದೆ' ಎಂದರು. ಜಿಲ್ಲಾಧಿಕಾರಿ ಕೆ.ಬಿ.ಶಿವಕುಮಾರ್ ಇದ್ದರು.

ದಿನಾಂಕ 24.04.2020 ರಂದು ಕೊವಿಡ್–19ರ ಲಾಕ್ಡೌನ್‌ನಿಂದ ಜೀವವೈವಿಧ್ಯತೆಯ ಮೇಲೆ ಸಂಭವಿಸಬಹುದಾದ ಹಾನಿಗಳನ್ನು ತಡೆಯುವ ಕುರತು ವಿವಿಧ ಇಲಾಖೆಗಳಿಗೆ ಮಾನ್ಯ ಅಧ್ಯಕ್ಷರ ಸಲಹೆ ನೀಡಿದರು




ಮಂಗನ ಕಾಯಿಲೆ ಸಂಶೋಧನಾ ಕೇಂದ್ರಕ್ಕೆ ಮಂಡಳಿಯ ಮಾನ್ಯ ಅಧ್ಯಕ್ಷರ ಭೇಟಿ



ಕುಂದಾಪುರ ತಾಲ್ಲೂಕಿನ ಮಾರಿಕಣಿವೆ ಪ್ರದೇಶಕ್ಕೆ ಮಂಡಳಿಯ ಮಾನ್ಯ ಅಧ್ಯಕ್ಷರ ಭೇಟಿ

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಆಶೀಸರ ನೇತೃತ್ವದ ಜೀವವೈವಿಧ್ಯ ಮಂಡಳಿ ಪದಾಧಿಕಾರಿಗಳು

# 'ಕಳಸವಳ್ಳಿ ಗುಡ್ಡ ಕುಸಿತ ಮಲೆನಾಡಿಗೆ ಎಚ್ಚರಿಕೆ ಗಂಟೆ'

■ ವಿಕ ಸುದ್ದಿಲೋಕ ಸಾಗರ

ತಾಲೂಕಿನ ಶರಾವತಿ ಕಣಿವೆ ಸೂಕ್ಷ್ಮ ಸ್ಥಿತಿ ತಲುಪಿದೆ. ರೈತರ ತೋಟ ನಾಶವಾಗುತ್ತಿದ್ದು, ಸ್ಥಳೀಯರು ಆತಂಕದಲ್ಲಿದ್ದಾರೆ ಎಂದು ರಾಜ್ಯ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಹೇಳಿದರು.

ತಾಲೂಕಿನ ಸಿಗಂದೂರು ಸಮೀಪದ ಕಳಸವಳ್ಳಿ ಭೂಕುಸಿತ ಪ್ರದೇಶಕ್ಕೆ ಸೋಮವಾರ ಭೂ ಕುಸಿತ ಅಧ್ಯಯನ ತಂಡದ ನೇತೃತ್ವ ವಹಿಸಿ ಭೇಟಿ ನೀಡಿದ ಸಂದರ್ಭ ಅವರು ಮಾತನಾಡಿದರು.

ಈ ವರ್ಷ ಮಳೆಗಾಲದ ಸಂದರ್ಭ ಭೂ ಕುಸಿತದ ಸಮಸ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಸಹ ಇದೆ. ಮಲೆನಾಡಿಗರು ಈ ಬಗ್ಗೆ ಎಚ್ಚರವಹಿಸಬೇಕು. ಕಳಸವಳ್ಳಿಯಲ್ಲಿ ಗುಡ್ಡ ಬಿರುಕು ಬಿಟ್ಟಿದೆ. ಗುಡ್ಡದ ಒಂದು ಬದಿಗೆ ಶರಾವತಿ ಜಲಾಶಯವಿದೆ. ಶರಾವತಿ ಅಭಯಾರಣ್ಯ ವ್ಯಾಪ್ತಿಯ ಕಳಸವಳ್ಳಿ ಗುಡ್ಡದ ಸ್ಥಿತಿ ಎಚ್ಚರಿಕೆಯ ಗಂಟೆ ಬಾರಿಸಿದೆ ಎಂದರು.

ಶರಾವತಿ ಕಣಿವೆಯಲ್ಲಿ ಅರಣ್ಯನಾಶದ ಹೊಸ ಯೋಜನೆಗಳು ಈ ಪರಿಸರದ ಸೂಕ್ಷ್ಮತೆಯನ್ನು ಹಾಳುಗೆಡವುತ್ತಿವೆ. ಗುಡ್ಡ ಬೆಟ್ಟಗಳ ಒತ್ತುವರಿಗೆ ಕಡಿವಾಣ ಅಗತ್ಯ. ಪಶ್ಚಿಮಘಟ್ಟಗಳ ಕಳೆದ 2 ವರ್ಷಗಳಿಂದ ಭೂ ಕುಸಿತದ ಸಮಸ್ಯೆ ಇರುವ ಸ್ಥಳಗಳಿಗೆ ಭೇಟಿ ನೀಡಿ, ಸಮಗ್ರ ವರದಿ, ಶಿಫಾರಸುಗಳನ್ನು 3 ತಿಂಗಳಲ್ಲಿ ಸರಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಉಪವಿಭಾಗಾಧಿಕಾರಿ ಡಾ. ಎಲ್.ನಾಗರಾಜ, ಡಿಎಫ್ಒ ಮೋಹನ್ ಕುಮಾರ್, ತಾಪಂ ಇಒ ಪುಷ್ಪ, ಸಾಮಾಜಿಕ ಅರಣ್ಯಾಧಿಕಾರಿ ನಟರಾಜ್ ದೇಸಾಯಿ, ಜಿಲ್ಲಾ ಭೂಗರ್ಭ ಅಧಿಕಾರಿಗಳು, ಪ್ರೀತಂ, ಪ್ರಸನ್ನ, ಕವಲಕೋಡು ವೆಂಕಟೇಶ, ಆನೆಗುಳಿ ಸುಬ್ಬರಾವ್, ಹು.ಭಾ.ಅಶೋಕ, ವಿಶ್ವೇಶ್ವರ, ಅಶೋಕ ತುಮರಿ ಮುಂತಾದವರಿದ್ದರು. ಕಳೆದ ವರ್ಷ ಮಾನ್ಸೂನ್ ಮಳೆ ವಿಪರೀತ ಸುರಿದಾಗ ಕಳಸವಳ್ಳಿ ಬಳಿ ಗುಡ್ಡ ಕುಸಿದಿತ್ತು. ಗುಡ್ಡ ಯಾಕಿಷ್ಟು ಕುಸಿಯಿತು ಎಂಬುದು ಸ್ಥಳೀಯರಲ್ಲಿ ಇಂದಿಗೂ ಅಚ್ಚರಿಗೆ ಕಾರಣವಾಗಿದೆ.



ಸಾಗರ ತಾಲೂಕಿನ ಸಿಗಂದೂರು ಸಮೀಪದ ಕಳಸವಳ್ಳಿ ಭೂಕುಸಿತ ಪ್ರದೇಶಕ್ಕೆ ಸೋಮವಾರ ರಾಜ್ಯ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ನೇತೃತ್ವದಲ್ಲಿ ಭೂ ಕುಸಿತ ಅಧ್ಯಯನ ತಂಡದವರು ಭೇಟಿ ನೀಡಿ ಪರಿಶೀಲಿಸಿದರು.

## ಜೀವವೈವಿಧ್ಯದ ಸಂರಕ್ಷಣೆ ಎಲ್ಲರ ಹೊಣೆ

**ಸಾಗರ:** ಮಲೆನಾಡಿನಲ್ಲಿರುವ ಸಮೃದ್ಧ ಪರಿಸರ ಮತ್ತು ಜೀವವೈವಿಧ್ಯವನ್ನು ಸಂರಕ್ಷಿಸಿಕೊಳ್ಳುವ ಹೊಣೆಗಾರಿಕೆ ಎಲ್ಲರದ್ದಾಗಿದೆ ಎಂದು ಶಾಸಕ ಎಚ್.ಹಾಲಪ್ಪ ಹೇಳಿದರು.

ತಾಲೂಕಿನ ಭೀಮನಕೋಣೆಯ ಮುಂಗರವಳ್ಳಿ ಚೈತನ್ಯ ವಿಶೇಷ ಮಕ್ಕಳ ಶಾಲಾವರಣದಲ್ಲಿ ಸೋಮವಾರ ಅರಣ್ಯ ಇಲಾಖೆ ಮತ್ತು ಜೀವವೈವಿಧ್ಯ ಮಂಡಳಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವೃಕ್ಷಾರೋಪಣ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ಅವರು ಮಾತನಾಡಿದರು.

ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಮಾತನಾಡಿ, ರಾಜ್ಯದ ಎಲ್ಲ ಗ್ರಾಪಂಗಳಲ್ಲಿ ಜೀವವೈವಿಧ್ಯ ಸಮಿತಿಗಳನ್ನು ರಚಿಸುವ ಯೋಜನೆ ಇದ್ದು, ಶಿವಮೊಗ್ಗ ಜಿಲ್ಲೆಯಲ್ಲಿ ಈಗಾಗಲೆ ಜೀವವೈವಿಧ್ಯ ಸಮಿತಿ ರಚಿಸುವ ಕೆಲಸ ನಡೆಯುತ್ತಿದೆ. ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಅರಣ್ಯ ಸಮಿತಿಗಳ ಮೂಲಕ ಸ್ಥಳೀಯವಾಗಿರುವ ನೆಲ ಜಲ ಅರಣ್ಯ, ಕೆರೆಕಟ್ಟೆಗಳನ್ನು ಸಂರಕ್ಷಿಸುವ ಬಗ್ಗೆ ಸಮಗ್ರ ಅಧ್ಯಯನ ನಡೆಸಿ, ಜೀವವೈವಿಧ್ಯ ದಾಖಲಾತಿಗಳನ್ನು ಮಾಡುವ ಯೋಜನೆ ಜಾರಿಗೊಳಿಸಲಾಗಿದೆ. ಅಂತಹ ಕಾರ್ಯಗಳಲ್ಲಿ ಸ್ಥಳೀಯರು ಸಕ್ರಿಯವಾಗಿ ಭಾಗವಹಿಸಿ, ಸಲಹೆ ಸೂಚನೆಗಳನ್ನು ನೀಡಲು ಅವಕಾಶವಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಟಿ.ಡಿ.ಮೇಘರಾಜ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಮೋಹನ್ ಕುಮಾರ್, ತಹಸೀಲ್ದಾರ್ ಚಂದ್ರಶೇಖರ ನಾಯ್ಕ್, ತಾಪಂ ಇಒ ಪುಷ್ಪಾ ಕಮ್ಮಾರ್, ಚೈತನ್ಯ ಶಿಕ್ಷಣ ಸಂಸ್ಥೆಯ ಎಂ.ಡಿ.ನಾಗರಾಜ್, ವಿದ್ಯಾಶಾಲೆಯ ಮುಖ್ಯಸ್ಥೆ ಶಾಂತಲಾ ಸುರೇಶ್, ಬಿ.ಎಚ್.ರಾಘವೇಂದ್ರ, ಕವಲಕೋಡು ವೆಂಕಟೇಶ್, ಪಂಚಾಯಿತಿ ಅಧ್ಯಕ್ಷೆ ರೂಪಾ ರವಿ, ಉಪಾಧ್ಯಕ್ಷ ಮಂಜುನಾಥ್, ಪಿಡಿಒ ಕೃಷ್ಣಪ್ಪ ಇನ್ನಿತರರು ಹಾಜರಿದ್ದರು.



ಸಾಗರ ತಾಲೂಕು ಭೀಮನಕೋಣೆಯ ಮುಂಗರವಳ್ಳಿ ಚೈತನ್ಯ ವಿಶೇಷ ಮಕ್ಕಳ ಶಾಲೆ ಆವರಣದಲ್ಲಿ ನಡೆದ ವೃಕ್ಷಾರೋಪಣ ಕಾರ್ಯಕ್ರಮದಲ್ಲಿ ಶಾಸಕ ಎಚ್.ಹಾಲಪ್ಪ, ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಭಾಗವಹಿಸಿದರು.

# ಸೂಕ್ಷ್ಮ ಸ್ಥಿತಿ ತಲುಪಿರುವ ಶರಾವತಿ ಕಣಿವೆ ಪ್ರದೇಶ: ಮಲೆನಾಡಿಗರು ಎಚ್ಚರ ವಹಿಸಲಿ

## ರಾಜ್ಯ ಜೀವವೈವಿಧ್ಯ ಮಂಡಳಿ ಮತ್ತು ಭೂಕುಸಿತ ಅಧ್ಯಯನ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ

• **ಕನ್ನಡಪ್ರಭ ವಾರ್ತೆ** ಸಾಗರ

ಶರಾವತಿ ಕಣಿವೆ ಪ್ರದೇಶ ಸೂಕ್ಷ್ಮ ಸ್ಥಿತಿಯನ್ನು ತಲುಪಿದ್ದು ಈ ವರ್ಷ ಮಳೆಗಾಲದಲ್ಲಿ ಭೂಕುಸಿತ ಸಂಭವಿಸುವ ಸಾಧ್ಯತೆ ಇರುವುದರಿಂದ ಮಲೆನಾಡಿಗರು ಹೆಚ್ಚು ಜಾಗೃತೆಯಿಂದ ಇರಬೇಕು ಎಂದು ರಾಜ್ಯ ಜೀವವೈವಿಧ್ಯ ಮಂಡಳಿ ಮತ್ತು ಭೂಕುಸಿತ ಅಧ್ಯಯನ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಎಚ್ಚರಿಕೆ ನೀಡಿದ್ದಾರೆ.

ತಾಲೂಕಿನ ತುಮರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕಳಸವಳ್ಳಿಯಲ್ಲಿ ಕಳೆದ ಮಳೆಗಾಲದಲ್ಲಿ ಭೂಕುಸಿತ ಸಂಭವಿಸಿದ ಸ್ಥಳಕ್ಕೆ ಅಧ್ಯಯನ ಸಮಿತಿ ಜೊತೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಕಳೆದ ವರ್ಷ ಮಳೆಗಾಲದಲ್ಲಿ ಭೂಕುಸಿತದಿಂದ ಅಡಕೆ ತೋಟ ಭಾಗಶಃ ಮಣ್ಣಿನೊಳಗೆ ಮುಚ್ಚಿ ಹೋಗಿದೆ. ಕಳಸವಳ್ಳಿ ಭೂಕುಸಿತ ಸಂಭವಿಸಿದ ಸ್ಥಳದ ಸಮೀಪವೇ ಶರಾವತಿ ಜಲಾಶಯವಿದೆ. ಸಿಗಂದೂರು ದೇವಸ್ಥಾನವೂ ಇದೆ. ಅಂಬಾರಗುಡ್ಡ, ಕೊಡಚಾದ್ರಿ, ಪರ್ವತಶ್ರೇಣಿಯೂ ಇದೆ. ಇಂತಹ ಪ್ರದೇಶದಲ್ಲಿ ಸಂಭವಿಸಿರುವ ಭೂಕುಸಿತದ ಬಗ್ಗೆ ಗಂಭೀರ ಚಿಂತನೆ ಅಗತ್ಯ ಎಂದರಲ್ಲದೆ ಭೂಕುಸಿತಕ್ಕೆ ಕಾರಣ, ಭವಿಷ್ಯದ ಪರಿಣಾಮ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಶರಾವತಿ ಕಣಿವೆ ಇನ್ನಷ್ಟು ಅರಣ್ಯನಾಶಿ ಯೋಜನೆಯ ಭಾರ ತಡೆದುಕೊಳ್ಳಲಾಗದ ಸ್ಥಿತಿಗೆ ತಲುಪಿದೆ. ಬೆಟ್ಟಗುಡ್ಡಗಳ ಒತ್ತುವರಿಯನ್ನು ಬಿಟ್ಟು, ಸ್ವಾಭಾವಿಕ ಅರಣ್ಯ ಬೆಳೆಸುವತ್ತ ಮಲೆನಾಡಿಗರು ಹೆಚ್ಚಿನ ಗಮನ ಹರಿಸಬೇಕು. ಪಶ್ಚಿಮಘಟ್ಟದಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆದಿರುವ ಭೂಕುಸಿತ ಪ್ರದೇಶಗಳಿಗೆ ಭೇಟಿ ನೀಡಿ ವರದಿ ತಯಾರಿಸಿ, ಮುಂದಿನ ಮೂರು ತಿಂಗಳಿನಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಇದರ ಜೊತೆಗೆ ಭೂಕುಸಿತ ತಡೆಗಟ್ಟುವ ನಿಟ್ಟಿನಲ್ಲಿ ಕೆಲವು ಶಿಫಾರಸ್ಸುಗಳನ್ನು ಮಾಡಲಾಗುತ್ತದೆ ಎಂದು ಹೇಳಿದರು.

ಉಪವಿಭಾಗಾಧಿಕಾರಿ ಡಾ.ನಾಗರಾಜ್, ತಹಶೀಲ್ದಾರ್ ಚಂದ್ರಶೇಖರ ನಾಯ್ಕ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಮೋಹನ್ ಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಕಾರಿ ಶಿವಮೂರ್ತಿ, ಮಾಲಿನ್ಯ ನಿಯಂತ್ರಣ ಮಂಡಳಿಯ ರವಿಶಂಕರ್, ಜೀವವೈವಿಧ್ಯ ಮಂಡಳಿಯ ಪ್ರೀತಮ್, ಪ್ರಸನ್ನ, ಗಣಿ ಮತ್ತು ಭೂಗರ್ಭ ಇಲಾಖೆಯ ರಶ್ಮಿ, ವೃಕ್ಷಲಕ್ಷ ಆಂದೋಲನದ ಆನೆಗುಳಿ ಸುಬ್ರಾವ್, ವೆಂಕಟೇಶ್ ಕವಲಕೋಡು, ಅಶೋಕ್ ಸೂರೆಮನೆ, ವಿಶ್ವೇಶ್ವರ ಕಳಸವಳ್ಳಿ, ಅನಿಲ್ ಕುಮಾರ್ ಇದ್ದರು.



ಕಳಸವಳ್ಳಿ ಭೂಕುಸಿತ ಪ್ರದೇಶಕ್ಕೆ ಅನಂತ ಹೆಗಡೆ ಆಶೀಸರ ಇತರರು ಭೇಟಿ ನೀಡಿ ಪರಿಶೀಲಿಸಿದರು.

ಕನ್ನಡಪ್ರಭ Wed, 17 June 2020
https://kpepaper.asianetnews.com/c/52802632

ದಿನಾಂಕ 15.06.2020ರಂದು ಸಾಗರ ತಾಲ್ಲೂಕಿನಲ್ಲಿ ಕೈಗೊಂಡ ಕ್ಷೇತ್ರ ಭೇಟಿ ಹಾಗೂ ಅಭಿಯಾನ

...ಜಿಲ್ಲೆಯ ಭೂಕುಸಿತ ಪ್ರದೇಶಗಳಿಗೆ ನಮ್ಮ
ಅಧಿಕಾರಿಗಳ ತಂಡ ಘಟನೆ ನಡೆದ
...ಲ್ಲೇ ಭೇಟಿ ನೀಡಿ ವರದಿ ನೀಡಿದೆ. ಹೆಚ್ಚು
ಮಳೆಯೇ ಇದಕ್ಕೆ ಕಾರಣ ಎಂದು
...ಳು ತಿಳಿಸಿದ್ದಾರೆ. ರಾಜ್ಯ ಮಟ್ಟದ ಅಧ್ಯಯನ
... ನೀಡುವುದು ನಮ್ಮ
...ರುವುದಿಲ್ಲ.

ಕೆ.ವಿ.ಶಿವಕುಮಾರ್ ಡಿಸಿ



ಎಲ್ಲಾ ಜಿಲ್ಲಾಡಳಿತ ಕರೊನಾ ನಿರ್ವಹಣೆಯಲ್ಲಿ ತೊಡಗಿರುವುದರಿಂದ ಭೂಕುಸಿತ ಪ್ರದೇಶಗಳಿಗೆ ಭೇಟಿ ನೀಡಿ ಅಧ್ಯಯನ ಮಾಡುವುದು ಸಾಧ್ಯವಾಗಿಲ್ಲ. ನಿಗದಿತ ಪ್ರವಾಸಗಳನ್ನು ಇದೇ ಕಾರಣದಿಂದ ರದ್ದುಗೊಳಿಸಲಾಗಿತ್ತು. ಜೂನ್ ತಿಂಗಳಿನಲ್ಲಿ ಭೂಕುಸಿತ ಪ್ರದೇಶಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸುತ್ತಿದ್ದೇನೆ.

| ಅನಂತ ಹೆಗಡೆ ಆಶೀಸರ
ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ

ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಹೆಚ್ಚಿನ ಪ್ರಯತ್ನ ಹಾಕುತ್ತಿದ್ದು ... ಸಹಯೋಗದೊಂದಿಗೆ ಎಲ್ಲೆಡೆ ಸ್ಯಾನಿಟೈಸ್ ಮಾಡಲಾಗಿದೆ.

ಕೆಲ ದಿನಗಳ ಹಿಂದೆ ರಂಗಪ್ಪವೃತ್ತದಿಂದ ಹೊಳೆಹೊಸ್ಸೂರು ವೃತ್ತದವರೆಗೂ ಮಾಡಲಾದ ಸೀಲ್‌ಡೌನ್ ಪ್ರದೇಶದಲ್ಲಿ ಯಾರೂ ಪ್ರವೇಶ ಮಾಡದಂತೆ ಪೊಲೀಸ್ ಇಲಾಖೆ ಎಚ್ಚರ ವಹಿಸಿದೆ. ಹೊರ ರಾಜ್ಯ ಹಾಗೂ ಜಿಲ್ಲೆಗಳಿಂದ ತಾಲೂಕಿಗೆ ಆಗಮಿಸಿರುವ ಜನರನ್ನು ಹೋಮ್ ಕ್ವಾರಂಟೈನ್ ಮಾಡುವಲ್ಲಿ ತಾಲೂಕು ಆರೋಗ್ಯಾಧಿಕಾರಿಗಳು ಹೆಚ್ಚಿನ ಶ್ರಮ ಹಾಕಿದ್ದಾರೆ.

## ಕಳಸವಳ್ಳಿ ಭೂಕುಸಿತ ಪ್ರದೇಶದಲ್ಲಿ ಅನಂತ ಹೆಗಡೆ ಪರಿಶೀಲನೆ



ಕಳಸವಳ್ಳಿ ಭೂ ಕುಸಿತ ಪ್ರದೇಶಕ್ಕೆ ಅನಂತ ಹೆಗಡೆ ಆಶೀಸರ ಭೇಟಿ ನೀಡಿದರು. ಶ್ರೀತಿ ನಾಯ್ಕ, ಮೋಹನ್ ಗಂಗೊಳ್ಳಿ ಇತರರಿದ್ದರು.

ಬ್ಯಾಕೋಡು: ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಸೋಮವಾರ ಕಳಸವಳ್ಳಿಯ ಕೆ.ಆರ್.ಗಣಪತಿ ಅವರ ತೋಟಕ್ಕೆ ಭೇಟಿ ನೀಡಿ ಕಳೆದ ಬಾರಿಯ ಮಳೆಯಲ್ಲಿ ಭಾರಿ ಗುಡ್ಡ ಕುಸಿತ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

ಹಿನ್ನೀರು ಪ್ರದೇಶಗಳಲ್ಲಿ ವಾಸಿಸುತ್ತಿರುವ ಸ್ಥಳೀಯ ನಿವಾಸಿಗಳು ಇಂತಹ ಭೂಕುಸಿತದಿಂದ ಕಂಗಾಲಾಗಿದ್ದು ಕೃಷಿಯೇ ಮೂಲಾಧಾರವಾಗಿರುವ ಒಟ್ಟು 28 ಕುಟುಂಬಗಳು ತಮ್ಮನ್ನು ಈ ಭಾಗಗಳಿಂದ ಸ್ಥಳಾಂತರ ಮಾಡಬೇಕು ಎಂದು ವನ್ಯಜೀವಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದರು. ಭೂಕುಸಿತಕ್ಕೆ ಕಾರಣವೇನೆಂದು ತಜ್ಞರ ತಂಡದೊಂದಿಗೆ ಚರ್ಚಿಸಿ ಸರ್ಕಾರಕ್ಕೆ ವರದಿ ನೀಡಿ ಸೂಕ್ತ ಪರಿಹಾರ ಕೊಡಿಸುವ ಬಗ್ಗೆ ಆಶೀಸರ ಭರವಸೆ ನೀಡಿದರು. ಸಾಗರ ಎಸಿ ಡಾ. ಎಲ್.ನಾಗರಾಜ್, ಸರ್ಕಾರಕ್ಕೆ ಸೂಕ್ತ ವರದಿ ಸಲ್ಲಿಸುವುದಾಗಿ ಭರವಸೆ ನೀಡಿದರು. ಡಿಎಫ್ ಮೋಹನ್ ಗಂಗೊಳ್ಳಿ, ತಹಸೀಲ್ದಾರ್ ಡಾ. ಕೆ.ಚಂದ್ರಶೇಖರ ನಾಯ್ಕ, ಆರ್‌ಎಫ್‌ಒ ಶ್ರೀತಿ ನಾಯ್ಕ, ಛಾಯಾ, ಎಲ್.ಸಿ.ಅನಿಲ್ ಕುಮಾರ್, ಹು.ಭಾ.ಅಶೋಕ್ ಇತರರಿದ್ದರು.

ದಿನಾಂಕ 15.06.2020ರಂದು ಸಾಗರ ತಾಲ್ಲೂಕಿನ ಕಳಸವಳ್ಳಿಯ ಭೂಕುಸಿತ ಪ್ರದೇಶದ ಪರಿಶೀಲನೆ.

## ತಾಲೂಕು ಮಟ್ಟದ ಜನತಾ ಜೀವ ಜಾಗೃತಿ ಅಭಿಯಾನ ಕಾರ್ಯಾಗಾರ

# ಜಿಲ್ಲೆಗೆ 5 ಲಕ್ಷ ಔಷಧಿ ಸಸಿ ವಿತರಣೆ



ಕೋಲಾರ ತಾಪಂ ಸಭಾಂಗಣದಲ್ಲಿ ಬುಧವಾರ ತಾಲೂಕು ಮಟ್ಟದ ಜನತಾ ಜೀವ ಜಾಗೃತಿ ಅಭಿಯಾನ ಕಾರ್ಯಾಗಾರ ನಡೆಯಿತು.

**ಕೋಲಾರ:** ಜಿಲ್ಲೆಗೆ 5 ಲಕ್ಷ ಔಷಧ ಗುಣವುಳ್ಳ ಸಸಿಗಳನ್ನು ನೀಡಲಾಗುವುದು ಎಂದು ಕೋಲಾರ ಜಿಲ್ಲೆಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಸಾಮ ಪ್ರಸನ್ನಕುಮಾರ್ ತಿಳಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ, ಜಿಪಂ ಹಾಗೂ ತಾಪಂ ಆಶ್ರಯದಲ್ಲಿ ನಡೆದ ತಾಲೂಕು ಮಟ್ಟದ ಜನತಾ ಜೀವ ಜಾಗೃತಿ ಅಭಿಯಾನ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ಸಹಾಯಕ ಸಂಶೋಧಕ ಪ್ರೀತಂ ಅವರು ಮಾತನಾಡಿ, ಪ್ರತಿ ವರ್ಷ ಮೇ 22 ರಂದು ಜೀವ ವೈವಿಧ್ಯ ದಿನ ಆಚರಿಸಲಾಗುತ್ತದೆ. ಕೋಲಾರದ ಅಂತರಗಂಗೆಯನ್ನು ಶತಶೃಂಗ ಶ್ರೇಣಿ ಎಂದು ಸಹ ಕರೆಯಲಾಗುತ್ತದೆ. ಈ ಬೆಟ್ಟದಲ್ಲಿ ಅನೇಕ ಗುಹೆಗಳು, ನಾನಾ ರೀತಿಯ ಪ್ರಾಣಿ ಸಂಕುಲ ಹಾಗೂ ಸಸ್ಯ ಸಂಕುಲ ಇವೆ. ಅಂತರಗಂಗೆ ಬೆಟ್ಟವನ್ನು ಜೀವ ವೈವಿಧ್ಯ ಪಾರಂಪರಿಕ ತಾಣ ಎಂದು ಮುಂದಿನ ದಿನಗಳಲ್ಲಿ ಘೋಷಣೆ ಮಾಡುವ ಸಾಧ್ಯತೆ ಇದೆ ಎಂದು ತಿಳಿಸಿದರು.

**ಸಂರಕ್ಷಣೆಗೆ ಸಹಕಾರಿ:** ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜೀವ ವೈವಿಧ್ಯ ಸಮಿತಿ ರಚಿಸಲಾಗಿದೆ. ಪ್ರತಿ ಗ್ರಾಮದ ವಿಶಿಷ್ಟ ಪ್ರಾಣಿ ಸಂಕುಲ ಹಾಗೂ ಸಸ್ಯ ರಾಶಿ ಗುರುತಿಸಿ ಅದನ್ನು ಜನತಾ ಜೀವ ದಾಖಲಾತಿ ಯಲ್ಲಿ ನೋಂದಣಿ ಮಾಡಬೇಕು ಎಂದು ಹೇಳಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹರ್ಷವರ್ದನ್ ಮಾತನಾಡಿ, ಮುಳಬಾಗಲು ಹನುಮನಹಳ್ಳಿ ಗ್ರಾಮದ ಗುಹೆಗಳಲ್ಲಿ ಎಲೆ ಮೂಗಿನ ಬಾವುಲಿ ಕಂಡುಬಂದಿದೆ. ಇದು ಪ್ರಪಂಚದಲ್ಲಿಯೇ ಅಪರೂಪದ ಪ್ರಾಣಿ. ಇದರ ಸಂರಕ್ಷಣೆ ಮಾಡಲಾಗಿದೆ ಹಾಗೂ ಕೆಂಪು ಹುಣಸೆ (ಸಿಹಿ ಹುಣಸೆ) ಇದನ್ನು ಜಿ ಟ್ಯಾಗ್‌ಗೆ ಶಿಫಾರಸು ಮಾಡಬಹುದು ಎಂದು ತಿಳಿಸಿದರು.

**ಪ್ರೋತ್ಸಾಹ ನೀಡಿ:** ಗ್ರಾಪಂಗಳು ಸ್ಥಳೀಯ ತಳಿಗಳನ್ನು ಸಂರಕಷಿಸಿ, ರೈತರು ತಮ್ಮ ಹೊಲಗಳಲ್ಲಿ ಬೆಳೆಯುವಂತೆ ಪ್ರೋತ್ಸಾಹ ನೀಡಬೇಕು. ಇದರಿಂದ ಆದಾಯ ಕೂಡ ಸಿಗುತ್ತದೆ. ಜೀವ ವೈವಿಧ್ಯ ನಿರ್ವಹಣಾ ಸಮಿತಿ ಜಿಲ್ಲೆಯಲ್ಲಿ 11 ಗ್ರಾಮಗಳನ್ನು ಸರ್ವೆ ಮಾಡಿದೆ. ಅದರಲ್ಲಿ 8 ಜೀವ ವೈವಿಧ್ಯಗಳು ದಾಖಲಾಗಿವೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲ ಗ್ರಾಮಗಳನ್ನು ಸರ್ವೆಗೆ ಒಳಪಡಿಸುತ್ತೇವೆ ಎಂದು ಹೇಳಿದರು. ತಾಪಂ ಉಪಾಧ್ಯಕ್ಷೆ ಸಿ.ಲಕ್ಷ್ಮಿ, ಸದಸ್ಯೆ ಮುದ್ದುಮಣಿ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಸದಸ್ಯ ನಿಖಿಲ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ದಿನಾಂಕ 03.06.2020ರಂದು ಕೋಲಾರದಲ್ಲಿ ತಾಲ್ಲೂಕ ಮಟ್ಟದಲ್ಲಿ ಜೀವವೈವಿಧ್ಯ ದಿನಾಚರಣೆ ಅಭಿಯಾನ

# ಮುಖ್ತಾಯ

ಮಾಹಿತಿ ಸಂಗ್ರಹಣೆ ಮತ್ತು ವರದಿ ತಯಾರಿಕೆ:
ಶ್ರೀ ಪ್ರೀತಮ್.ಎಸ್
ಸಹಾಯಕ ಸಂಶೋಧಕ (ಪ್ರಾಣಿಶಾಸ್ತ್ರ)
ಕರ್ನಾಟಕ ಜೀವವೈವಿಧ್ಯ ಮಂಡಳಿ

ವಿಮರ್ಶೆ ಮತ್ತು ಸಹಾಯ:
ಶ್ರೀಮತಿ ಅಂಬುಜ. ಪಿ
ಸದಸ್ಯ ಕಾರ್ಯದರ್ಶಿಯ ಆಪ್ತ ಸಹಾಯಕರು
ಕರ್ನಾಟಕ ಜೀವವೈವಿಧ್ಯ ಮಂಡಳಿ